# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹೊಸನಗರ

## ಸಿ.ಸಿ. ನಂ. 707/2020

**ಚಾಸಾ–4 ಪ್ರಾಸಾ–3**

| | | |
|---|---|---|
| ಹೆಸರು | – | ಜಗಧೀಶ |
| ತಂದೆಯ ಹೆಸರು | – | ಕಾಡಪ್ಪ |
| ವಯಸ್ಸು | – | 42 ವರ್ಷ |
| ವೃತ್ತಿ | – | ವ್ಯವಸಾಯ |
| ವಾಸಸ್ಥಳ | – | ಮಳವಳ್ಳಿ ಮತ್ತಿಕೊಪ್ಪ. |

(ದಿನಾಂಕಃ **23.07.2026** ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು)

**ಮುಖ್ಯ ವಿಚಾರಣೆ ಃ ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದ ಃ**

1. ಚಾಸ 1 ರವರು ನನ್ನ ತಂದೆ. ಚಾಸ 5 ರವರು ನನ್ನ ಹೆಂಡತಿ. ನನಗೆ ಚಾಸ 2, ಚಾಸ 3, ಚಾಸ 7 ರವರ ಪರಿಚಯ ಇರುತ್ತದೆ. ನನಗೆ ಚಾಸ 6 ರವರ ಪರಿಚಯ ಇರುತ್ತದೆ ಆದರೆ ಅವರು ಈಗ ಮರಣ ಹೊಂದಿರುತ್ತಾರೆ.

2. ನಮ್ಮ ವಾಸದ ಮನೆ ಮಳವಳ್ಳಿ ಮತ್ತಿಕೊಪ್ಪ ಮಸಗಲ್ಲಿ ಗ್ರಾಮದಲ್ಲಿ ಇರುತ್ತದೆ. ನಾನು ನಮ್ಮ ಮನೆಯಲ್ಲಿ ಚಾಸ 1, ಚಾಸ 5 ನನ್ನ ತಾಯಿಯಾದ ಯಲ್ಲಮ್ಮ ಮತ್ತು ನನ್ನ ಮಕ್ಕಳೊಂದಿಗೆ ವಾಸವಾಗಿರುತ್ತೇನೆ.

3. ನಮ್ಮ ಮನೆಯ ಪಕ್ಕದಲ್ಲಿ ಚಾಸ 7 ರವರಿಂದ ಸರ್ವೆ ನಂ 83/4 ಅನ್ನು ನನ್ನ ಹೆಂಡತಿಯಾದ ಚಾಸ 5 ರವರ ಹೆಸರಿನಲ್ಲಿ ಕ್ರಯ ಪಡೆದಿರುತ್ತೇನೆ. ಅದರ ವಿಸ್ತೀರ್ಣ 1 ಎಕರೆ 19 ಗುಂಟೆ ಖುಷ್ಕಿ ಜಮೀನು ಇರುತ್ತದೆ.

4. ನಾವು ಖರೀದಿ ಮಾಡಿದ ಜಮೀನಿನಲ್ಲಿ ವಾಸವಾಗಿರುತ್ತೇವೆ. ನಮ್ಮ ತಾಯಿಗೆ ಪಾರ್ಶ್ವ ಆಗಿರುವುದರಿಂದ ನಮ್ಮ ಮನೆಯ ಪಕ್ಕದಲ್ಲಿ ಇರುವ ಹಳೆಯ ಮನೆಯಲ್ಲಿ ವಾಸವಾಗಿರುತ್ತಾರೆ.

5. ನಾನು ಸರ್ವೆ ನಂ 83/4 ಅನ್ನು ಖರೀದಿಸಿದ್ದರಿಂದ ನಮ್ಮ ಮತ್ತು ಆರೋಪಿಗಳ ಮಧ್ಯ ವೈಮನಸ್ಸು ಉಂಟಾಗಿರುತ್ತದೆ. ದಿನಾಂಕಃ 27.05.2020 ರಂದು ಸಂಜೆ 6 ಗಂಟೆ ಸಮಯದಲ್ಲಿ ನಾನು, ಚಾಸ5 ರವರು ನಮ್ಮ ಮನೆಯ ಹತ್ತಿರ ಕೆಲಸ ಮಾಡುತ್ತಿರುವಾಗ ಅದೇ ದಿನ ಸಂಜೆ 6 ಗಂಟೆ ಸಮಯದಲ್ಲಿ ಆರೋಪಿ 1 ರಿಂದ 3 ರವರು ಒಂದು ಪಿಕ್ ಅಪ್ ವಾಹನ ಸಂಖ್ಯೆ ಕೆ.ಎ 18 ಎ 6375 ಅನ್ನು ತೆಗೆದುಕೊಂಡು ಬಂದು ನಮ್ಮ ಮನೆಯ ಹಿಂದೆಯ ಸೂರಿಗೆ ಡಿಕ್ಕಿ ಪಡಿಸಿರುತ್ತಾರೆ.

6. ಆಗ ನನ್ನ ತಂದೆಯಾದ ಚಾಸ1 ರವರು ಆರೋಪಿ 1 ರಿಂದ 3 ರವರಿಗೆ ಸುಮ್ಮನೆ ಏಕೆ ತೊಂದರೆ ಕೊಡುತ್ತಿದ್ದಿರಾ ಎಂದು ಪ್ರಶ್ನಿಸಿದಾಗ ಆರೋಪಿ 1 ರಿಂದ 3 ರವರು ಚಾಸ1 ರವರಿಗೆ ಏನೋ ಬೋಳಿಮಗನೇ ನೀನು ಯಾರು ಕೇಳುವುದಕ್ಕೆ ಎಂದು ಹೇಳಿರುತ್ತಾರೆ.

7. ಅದೇ ಸಂದರ್ಬದಲ್ಲಿ ಆರೋಪಿ 4 ಮತ್ತು 5 ರವರು ಸ್ಥಳಕ್ಕೆ ಬಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ಅಲ್ಲೇ ಇದ್ದ ದೊಣ್ಣೆಯಿಂದ ಆರೋಪಿ 1 ರವರು ಚಾಸ1 ರವರಿಗೆ ಎಡ ಹಣೆಗೆ ಹೊಡೆದಿರುತ್ತಾರೆ. ಹಾಗೂ ಇನ್ನೊಂದು ದೊಣ್ಣೆಯಿಂದ ಆರೋಪಿ 3 ರವರು ನಮ್ಮ ತಂದೆಯಾದ ಚಾಸ1 ರವರ ಎಡ ಕೈಗೆ ಹಲ್ಲೆ ಮಾಡಿರುತ್ತಾರೆ.

8. ಅದೇ ಸಂದರ್ಬದಲ್ಲಿ ಆರೋಪಿ 2, 4 ಮತ್ತು 5 ರವರು ನಮ್ಮ ತಂದೆಯನ್ನು ದೂಡಾಡಿ ಕೆಳಗೆ ಕೆಡವಿ ಕಾಲಿನಿಂದ ಒದ್ದಿರುತ್ತಾರೆ. ಆಗ ಚಾಸ1 ರವರು ಕೂಗಿಕೊಂಡಾಗ ನಾನು ಮತ್ತು ಚಾಸ5 ರವರು ಹೋಗಿ ಗಲಾಟೆಯನ್ನು ಬಿಡಿಸಿರುತ್ತೇವೆ. ಆಗ ಆರೋಪಿಗಳು ನಮಗೆ ಜೀವ ಬೆದರಿಕೆ ಹಾಕಿರುತ್ತಾರೆ.

9. ಆರೋಪಿ 1 ಮತ್ತು 3 ರವರ ಬಳಿ ಇದ್ದ ದೊಣ್ಣೆಗಳನ್ನು ಕಸಿದುಕೊಂಡಿ ಅಲ್ಲೇ ಬಿಸಾಕಿರುತ್ತೇನೆ. ನಂತರ ಚಾಸ1 ರವರನ್ನು ಸುಧಾರಿಸಿ ತಕ್ಷಣ ಅವರನ್ನು ವಾಹನದಲ್ಲಿ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ಕರೆದುಕೊಂಡು ಹೋಗಿರುತ್ತೇನೆ.

10. ನಾನು ನಮ್ಮ ತಂದೆಯಾದ ಚಾಸ 1 ರವರು ಹೇಳಿದಂತೆ ದೂರನ್ನು ನನ್ನ ಹಸ್ತಾಕ್ಷರದಲ್ಲಿ ಬರೆದಿರುತ್ತೇನೆ. ಸದರಿ ದೂರನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿಯನ್ನು ಈಗಾಗಲೇ ನಿಪಿ1 ಎಂದು ಗುರುತಿಸಲ್ಪಟ್ಟಿರುತ್ತದೆ, ಅದರಲ್ಲಿನ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಸಾಕ್ಷಿ ಸಹಿಯನ್ನು ನಿಪಿ1(ಬಿ) ಎಂದು ಗುರುತಿಸಲಾಯಿತು.

11. ನನ್ನ ಹೇಳಿಕೆಯನ್ನು ಪೊಲಿಸರು ಪಡೆದುಕೊಂಡಿರುತ್ತಾರೆ. ದಿನಾಂಕಃ 29.05.2020 ರಂದು ಘಟನಾ ಸ್ಥ,ಳಕ್ಕೆ ಪೊಲಿಸರು ಬಂದಿದ್ದು ಸದರಿ ಸ್ಥಳವನ್ನು ನಾನೇ ತೋರಿಸಿದ್ದು ನನ್ನ ಜೊತೇ ಪಂಚರಾದ ಚಾಸ 2 ಮತ್ತು ಚಾಸ 3 ರವರು ಇದ್ದು ಸದರಿ ಪಂಚನಾಮೆಯನ್ನು ಬೆಳಗ್ಗೆ 10.30 ರಿಂದ 11.30 ರವರೆಗೆ ಜರುಗಿಸಿರುತ್ತಾರೆ.

12. ಸ್ಥಳದಲ್ಲಿ ಮಹಜರ್ ಜರುಗಿಸಿ ಕಚ್ಚಾನಕ್ಷೆಯನ್ನು ತಯಾರಿಸಿ ಪೊಟೋಗಳನ್ನು ತೆಗೆದು ಎರಡು ದೊಣ್ಣಗಳನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ಸದರಿ ಎರಡು ದೊಣ್ಣೆಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳು ಈಗಾಗಲೇ ಎಂ.ಒ 1 ಮತ್ತು 2 ಎಂದು ಗುರುತಿಸ್ಪಟ್ಟಿರುತ್ತವೆ.

13. ಈ ಹಂತದಲ್ಲಿ ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು, ಅದು ಪಂಚನಾಮೆಯಾಗಿದ್ದು, ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿಯನ್ನು ಈಗಾಗಲೇ ನಿಪಿ2 ಎಂದು ಗುರುತಿಸಲ್ಪಟ್ಟಿರುತ್ತದೆ, ಅದರಲ್ಲಿನ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಸಾಕ್ಷಿ ಸಹಿಯನ್ನು ನಿಪಿ2(ಬಿ) ಎಂದು ಗುರುತಿಸಲಾಯಿತು.

14. ಈ ಹಂತದಲ್ಲಿ ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು, ಅದು ಕಚ್ಚಾನಕ್ಷೆಯಾಗಿದ್ದು, ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿಯನ್ನು ಈಗಾಗಲೇ ನಿಪಿ3 ಎಂದು ಗುರುತಿಸಲ್ಪಟ್ಟಿರುತ್ತದೆ, ಅದರಲ್ಲಿನ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಸಾಕ್ಷಿ ಸಹಿಯನ್ನು ನಿಪಿ3(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಬಾವ ಚಿತ್ರಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳು ಈಗಾಗಲೇ ನಿಪಿ4 ರಿಂದ ನಿಪಿ7 ಎಂದು ಗುರುತಿಸ್ಪಟ್ಟಿರುತ್ತದೆ.

**ಪಾಟೀ ಸವಾಲುಃ ಆರೋಪಿಗಳ ರವರ ಪರ ವಕೀಲರಾದ ಶ್ರೀ ಎ.ಎಂ.ಎಲ್ ರವರು ಶ್ರೀ ವೈ.ಪಿ.ಎಂ ರವರ ಪರವಾಗಿ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಶ್ರೀ ವೈ.ಪಿ.ಎಂ ವಕೀಲರು ಮಧ್ಯಸ್ಥಿಗಾರಿಕೆ ತರಬೇತಿ ಪಡೆಯಲು ಶಿವಮೊಗ್ಗದಲ್ಲಿ ಇರುವುದರಿಂದ ಪಾಟೀ ಸವಾಲನ್ನು ಮುಂದುಡಾಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸ. ಎಂ. ಒ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಹೊಸನಗರ.